5. ಮೇಲ್ಕಂಡ ಸ್ಪೇರ್ಷಗಳ ಪೈಕೀ ಪ್ರತಿ ಸ್ಪೇರ್ಷನಲ್ಲಿಯೂ ಸಾದೆ ಯಸ್ಟು ಕಮ್ಮಿದರಕ್ಕೆ ಒಪ್ಪಿಸಲ್ಪಡುವದೋ ಅಂಥಾ ಕಮ್ಮಿದರವನ್ನ ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸತಕ್ಕದ್ದು. ದರಖಾಸ್ತಿನ ಸಂಗಡ ನಗದಾಗಿ ಯಾಗಲಿ ಕರ್ಣಿಸೀ ನೋಟುಗಳ ಮೂಲಕವಾಗಲಿ 100 ರೂಪಾಯಿಗಳ ಡಿಪಾಜಿಟ್ ಕಳುಹಿಸಿದ ಹೊರ್ತು ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು. ಮೇಲ್ಕಂಡ ದರದಲ್ಲಿ ಸಾದೆ ಕಡಿಯುವ, ಸಾಗಿಸುವ ಕುಯ್ಯುವ ಮತ್ತು ರೆಯಿಲ್ವೇ ಸ್ಪೇರ್ಷಗಳಲ್ಲಿ ಸ್ಟ್ಯಾಕ್ ಅಂದರೆ ಕುಯಿದ ಸಾದೆಯನ್ನ ಫೇರಿಸುವ ವಿಸ್ಟು ಲಾಗವಡೂ ಅಡಗಿರತಕ್ಕದ್ದು.

6. ಇದರಡೀ ರುಜೂ ಮಾಡಿರುವವರಿಂದ ಯಾ ಅವರಿಂದ ನೇಮಿಸಲ್ಪಟ್ಟವರಿಂದ ಅವರ ಆಫೀಸಿನಲ್ಲಿ 1887ನೇ ಇಸವಿ ಡಿಸಂಬರ್ 10ನೇ ತಾರೀಖು ಮಧ್ಯಾನ್ನ 12 ಘಂಟೆಗೆ ಹಾಜರ್ ಇರುವ ದರಖಾಸ್ತುದಾರರುಗಳ ರೂಬರೂ ದರಖಾಸ್ತುಗಳು ಖುಲ್ಲಾ ಮಾಡಲ್ಪಡುವವು.

7. ಇದರಡೀ ರುಜೂ ಮಾಡಿರತಕ್ಕವರು ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸುವ ಸ್ವಾತಂತ್ರ್ಯವನ್ನ ತಮ್ಮಲ್ಲಿವಿ ಉಳಿಸಿಕೊಂಡು ಯಿರುತ್ತಾರೆ.

8. ಯಾವ ಪೋಟೂಪೋಟಿದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅಂಥಾವನ ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಡುವವದು. ಆತನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಆತನಿಗೆ ತಿಳಿದ ತಾರೀಖು ಲಾಗಾಯಿತು ಒಂದು ವಾರದವಳಗಾಗಿ ಸದರೀ ದರಖಾಸ್ತುದಾರನು ಕಂಟ್ರಾಕ್ಟು ಮುಚ್ಚಳಿಕೆ ಬರೆದು ಕೊಡಲಿಕ್ಕಾಗಲಿ ತನ್ನ ಕಂಟ್ರಾಕ್ಟು ಷರತ್ತುಗಳು ನೆರವೇರಿಸುವ ಬಗ್ಯೆ ನಗದು 500 ರೂಪಾಯಿಗಳು ತೇವಣೀ, ಜಾಮೀನು ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ಆತನ ಡಿಪಾಜಿಟ್ ಮೊಬಲಗ್ ದಂಡವಾಗಿ ತೆಗದುಕೊಳ್ಳಲ್ಪಡುವದು.

9. ದರಖಾಸ್ತುಗಳ ಮೇಲೆ ಸಾತ್‌ಮುರ್ತಾ ರೆಯಿಲ್ವೇಗೆ "ಸಾದೇ ಸರಬರಾಯಿ ಮಾಡುವ ಬಗ್ಯೆ ದರಖಾಸ್ತುಗಳು" ಯೆಂದು ಮೇಲ್‌ವಿಳಾಸ ಬರಿಯತಕ್ಕದ್ದು.

10. ದರಖಾಸ್ತುದಾರ್ ತನ್ನ ಮೊದಲನೇ ಸರಬರಾಯಿಯನ್ನ 1888ನೇ ಇಸವಿ ಫಿಬ್ರವರೀ 1ನೇ ಮಕ್ತುಂನಲ್ಲಿ ಮಾಡತಕ್ಕದ್ದು.

ಯಸ್. ಹಿಚ್. ವಾರ್ಡ್,
ಫಾರ್ ಡಿಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 555.

ಮೃತಪಟ್ಟ ಮೊದೆಪಟೇಲ್ ದೊಡ್ಡೇಗವ್ವಡರ ಮತ್ತು ಇವರ ಮಗ ನಂಜೇಗವ್ವಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮೊದೆ ಪಟೇಲ್ ದೊಡ್ಡೇಗವ್ವಡರು ಮೃತಪಟ್ಟ ಸದರೀ ದೊಡ್ಡೇಗವ್ವಡ ನಂಜೇಗವ್ವಡರಿಗೆ 1ನೇ ಯವನಿಗೆ ಮಗ 2ನೇ ಯವನಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಮರಡಿಕೆರೇ ಗ್ರಾಮದ ಸ್ಥಳದ ಸದರೀ ದೊಡ್ಡೇಗವ್ವಡರು ಸದರೀ ವಾಸಸ್ಥರಾಗಿ ಮೃತಪಟ್ಟ ದೊಡ್ಡೇಗವ್ವಡರ ನಂಜೇಗವ್ವಡರ ಜಿಂದಗೀ ಬಗ್ಯಾಗಿ ಬರತಕ್ಕ 5000 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೊಡ್ಡೇಗೌಡರ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡೇಗೌಡ. ನಂಜೇಗೌಡರೆ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1887ನೇ ಇಸವಿ ನವೆಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸೀ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇಮೋಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.